SRI M. MALLAPPA (Minister for Health and Family Welfare).—

(*a*) Yes.

(*b*) Yes.

(*c*) Government do contemplate to take up steps immediately.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ನನ್ನ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಆರೋಗ್ಯ ಮಂತ್ರಿಗಳು ಸಾಗರದ ಜನರಲ್ ಆಸ್ಪತ್ರೆಯಲ್ಲಿರತಕ್ಕ ತೊಂದರೆಗಳನ್ನು ಗಮನಿಸಿದ್ದಾರೆ ಮತ್ತು ಅದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಅದಕ್ಕೆ ನಮ್ಮ ಕೃತಜ್ಞತೆಗಳು. ನಮ್ಮ ಮಲೆನಾಡಿನಲ್ಲಿ ಜನರಿಗೆ ವಿಶೇಷ ರೀತಿಯ ಖಾಯಿಲೆಗಳು ಬರುತ್ತವೆ. ಹಂದಿಗಳ ರೋಗ, ಕಾಶನೂರು ರೋಗ ಮುಂತಾದ ರೋಗಗಳ ಒತ್ತಡದಿಂದಾಗಿ ರೋಗಿಗಳ ಒತ್ತಡ ಆಸ್ಪತ್ರೆಯಲ್ಲಿ ಜಾಸ್ತಿಯಾಗುತ್ತದೆ. ಇಲ್ಲಿ ಸಾಕಷ್ಟು ಬೆಡ್ ಸ್ಪೇಸಿಂಗ್ ಇಲ್ಲವೆನ್ನುವುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಗಮನಿಸಬೇಕು.

† ಶ್ರೀ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರ ಪ್ರಶ್ನೆ ಆಸ್ಪತ್ರೆಯ ಕಟ್ಟಡದ ಬಗ್ಗೆ ಇರುವುದು. ಈ ಆಸ್ಪತ್ರೆಯ ಮೇಲ್ಛಾವಣಿ ಸರಿಯಾಗಿಲ್ಲದ ಕಾರಣ ಇದನ್ನು ಬದಲಾವಣೆ ಮಾಡುವುದಕ್ಕಾಗಿ ಸುಮಾರು ೨.೨೦ ಕ್ಷಲರೂಪಾಯಿಗ ಳಅಂದಾಜು ತಯಾರಾಗಿದೆ. ಇದನ್ನು ಮುಂಜೂರು ಮಾಡಿಸಿ ಏನು ಕೆಲಸ ಮಾಡಿಸಬೇಕೋ ಅದನ್ನು ತೀವ್ರವಾಗಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ —ಮುಂದಿನ ಮಳೆಗಾಲದೊಳಗೆ ಈ ಕೆಲಸವನ್ನು ತಾವು ಮುಗಿಸಬೇಕು. ಈ ಒಂದು ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು ಎಂದು ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಳೆಗಾಲ ಬಂದರೆ ಈ ಆಸ್ಪತ್ರೆಯಲ್ಲಿ ಒಂದು ಹಾಸಿಗೆಯೂ ಖಾಲಿ ಇರುವುದಿಲ್ಲ.

ಶ್ರೀ ಎಂ. ಮಲ್ಲಪ್ಪ.—ಬಹುಬೇಗ ಈ ಕೆಲಸವನ್ನು ಮಾಡಿಸೋಣ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರ ಪ್ರಶ್ನೆಯ ಬಗ್ಗೆ ಮಾನ್ಯ ಮಂತ್ರಿಗಳು ತೀವ್ರವಾಗಿ ಕಾರ್ಯಕ್ರಮ ಕೈಗೊಳ್ಳುವುದು ಸರ್ಕಾರದ ಉದ್ದೇಶವಾಗಿದೆಯೆಂದು ಉತ್ತರ ಕೊಟ್ಟಿದ್ದಾರೆ ಸಾಗರದಲ್ಲಿ ಸುಮಾರು ೩೦೦ ಇಂಚು ಮಳೆಯಾಗುತ್ತದೆ. ಆಸ್ಪತ್ರೆಯಲ್ಲಿ ರೋಗಿಗಳು ಮಲಗಿ ಕೊಂಡಿದ್ದು ಮೇಲ್ಛಾವಣಿ ಇಲ್ಲದಿರುವಾಗ ದುರಸ್ತಿಯ ಕೃಪೆಯಾದರೆ ರೋಗಿಗಳು ಶೀತದ ರೋಗಕ್ಕೆ ಸತ್ತು ಹೋಗಬೇಕಾಗುತ್ತದೆ. ಇಷ್ಟು ಹೊತ್ತಿಗೆ ಮಾನ್ಯಮಂತ್ರಿಗಳು ಸೂಕ್ತಕ್ರಮ ತೆಗೆದುಕೊಳುತ್ತಾರೆಂದು ನಾವು ನಿರೀಕ್ಷಣೆ ಮಾಡಿದ್ದೆವು. ಆದರೆ ಇನ್ನೂ ಆಗಿಲ್ಲ, ಆದ್ದರಿಂದ ಯಾವಾಗ ಈ ಕೆಲಸವನ್ನು ಶುರು ಮಾಡಿಸಿಕೊಡುತ್ತೀರಿ?

ಶ್ರೀ ಎಂ. ಮಲ್ಲಪ್ಪ.—ನಾನೇ ಖುದ್ದಾಗಿ ಈ ಆಸ್ಪತ್ರೆಯನ್ನು ನೋಡಿದ್ದೇನೆ. ಇದಕ್ಕೆ ಸಂಬಂಧಪಟ್ಟಂತೆ ಅಂದಾಜನ್ನು ತಯಾರು ಮಾಡಿಸಿ, ಅದನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಿ ಕೆಲಸ ಮಾಡಿಸಬೇಕಾಗಿದೆ. ೨.೨೦ ಲಕ್ಷ ರೂಪಾಯಿಗಳ ಅಂದಾಜು ಸ್ಕೂಟಿನಿ ಸ್ಟೇಜನಲ್ಲಿದೆ. ಅದು ಬಂದ ನಂತರ ಶೀಘ್ರವಾಗಿ ಕೆಲಸ ಮಾಡಲಿಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಜೂನ್ ತಿಂಗಳೊಳಗಾಗಿ ಈ ಕೆಲಸಮಾಡಿಸುತ್ತೀರಾ?

ಶ್ರೀ ಎಂ. ಮಲ್ಲಪ್ಪ.—ಮಾನ್ಯ ಸದಸ್ಯರು ಲೋಕೋಪಯೋಗಿ ಇಲಾಖೆಯ ದಕ್ಷತೆಯ ಮೇಲೆ ನಂಬಿಕೆ ಇಟ್ಟರೆ ಕೆಲಸ ಬೇಗ ಆಗುತ್ತದೆ.

Transferring Aided School Teachers

361. SRI T. B. JAYACHANDRA (Kallambella).—Will the Minis for Education be pleased to state:—

whether the Government intend to introduce system of transfer of teachers of aided school from one school to the other school to avoid teachers in entering into political activities in villages and also to avoid frequent frictions between the management and the eachers?

SRI B. SUBBAYYA SHETTY (Minister for Education).—

As per Rule 51 of the Uniform Grant-in-aid Code for primary Schools, transfers in aided schools are effected only by managements with prior permission of the Department.

Government does not order transfer of teachers in aided schools at present.

ಶ್ರೀ ಟಿ. ಬಿ. ಜಯಚಂದ್ರ.— ನನ್ನ ಪ್ರಶ್ನೆಗೆ ಉತ್ತರವಾಗಿ ತಾವು ಸರ್ಕಾರದಿಂದ ಪೂರ್ವಭಾವಿಯಾಗಿ ಅನುಮತಿ ತೆಗೆದುಕೊಂಡು ಖಾಸಗಿ ಶಾಲೆಯ ಉಪಾಧ್ಯಾಯರುಗಳನ್ನು ವರ್ಗ ಮಾಡಬಹುದು, ಮತ್ತು ಸರ್ಕಾರವೇ ಈ ದಿಸೆಯಲ್ಲಿ ಆಜ್ಞೆಯನ್ನು ನೀಡುವುದಿಲ್ಲ ಎಂದು ಹೇಳಿದ್ದೀರಿ. ನಮಗೆ ಗೊತ್ತಿರುವ ಹಾಗೆ ಈಖಾಸಗಿ ಶಾಲೆಗಳು ಕೆಲವೇ ಜನರ ಹಾಗೂ ಕೆಲವೇ ಕೋಮಿನವರ ಕೈಯಲ್ಲಿವೆ ಇವರು, ಅವರಿಗೆ ಬೇಕಾದವರನ್ನೆ ಕೆಲಸಕ್ಕೆ ತೆಗೆದುಕೊಂಡು, ತೆಗೆದುಕೊಂಡಂಥ ಉಪಾಧ್ಯಾಯರುಗಳು ಬಹಳವರ್ಷಗಳ ವರೆಗೆ ಎಲ್ಲಿಗೂ ವರ್ಗವಾಗದೆ ಇರುವುದರಿಂದ, ಸ್ಥಳೀಯರಾಗಿ ರಾಜಕೀಯವನ್ನು ಹೆಚ್ಚು ಮಾಡುತ್ತಿದ್ದಾರೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಸಹ ನಾವು ಎಲೆಕ್ಷನ್‌ಗೆ ಹೋದಾಗ ರೈತರು, ನಮ್ಮ ಊರಿನ ಉಪಾಧ್ಯಾಯರಿಗೆ ಒಂದು ಮಾತನ್ನು ಹೇಳಿ ಎಂದು ಕೊನೆಯಲ್ಲಿ ಹೇಳುತ್ತಿರುವುದು ನಮಗೆ ಗೊತ್ತಿದೆ. ಇದರಿಂದ ಉಪಾಧ್ಯಾಯರುಗಳು ರಾಜಕೀಯದಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಾರೆನ್ನುವುದು ಗೊತ್ತಾಗುತ್ತದೆ ಆದ್ದರಿಂದ ಈ ಉಪಾಧ್ಯಾಯರನ್ನೂ ಸಹ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾವಣೆ ಮಾಡುವುದಕ್ಕೆ ಸಾಧ್ಯವೇ?

† ಶ್ರೀ ಬಿ. ಸುಬ್ಬಯ್ಯಶೆಟ್ಟಿ.—ಮಾನ್ಯ ಸದಸ್ಯರು ಖಾಸಗಿ ಶಾಲೆಗಳಲ್ಲಿ ಉಪಾಧ್ಯಾಯರನ್ನು ವರ್ಗಾವಣೆ ಮಾಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದಾರೆ. ಇವರುಗಳು ಒಂದೇ ಮ್ಯಾನೇಜ್‌ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದು ಅವರವರ ಶಾಲೆಗಳಲ್ಲಿ ವರ್ಗ ಮಾಡಿಕೊಳ್ಳಲು ನಮ್ಮದೇನೂ ಆಭ್ಯಂತರವಿಲ್ಲ. ಈ ರೀತಿಯಾಗಿ ವರ್ಗವಾದ ಮೇಲೆ ಡಿಪಾರ್ಟ್‌ಮೆಂಟಿಗೆ ಅವರು ತಿಳಿಸಬೇಕಾಗುತ್ತದೆ. ಬೇರೆ ಬೇರೆ ಮ್ಯಾನೇಜ್‌ಮೆಂಟ್‌ಗಳು ಆದರೆ ಎರಡು ಮಾನೇಜ್‌ಮೆಂಟಿನವರು ಕೂಡ ರೆಸಲ್ಯೂಷನ್ ಪಾಸ್ ಮಾಡಿ ಡಿಪಾರ್ಟ್‌ಮೆಂಟಿಗೆ ತಿಳಿಸಿದಾಗ, ನಾವು ಅದನ್ನು ಪರಿಶೀಲಿಸಿ ಅನುಮತಿ ಕೊಟ್ಟರೆ ಮಾತ್ರ ವರ್ಗ ಮಾಡಲಿಕ್ಕೆ ಸಾಧ್ಯ. ಮತ್ತೆ ಮಾನ್ಯ ಸದಸ್ಯರು ಈ ಉಪಾಧ್ಯಾಯರುಗಳು ರಾಜಕೀಯ ಚಟುವಟಿಕೆಯಲ್ಲಿ ತೊಡಗಿರುವ ವಿಷಯವನ್ನು ತಿಳಿಸಿದ್ದಾರೆ. ಇದು ನಿಜವಾಗಿದ್ದರೆ, ಇದು ದುರಾದೃಷ್ಟಕರವಾದ ಸಂಗತಿ. ಶಾಲೆ ಎಂದ ತಕ್ಷಣ, ಇದರಲ್ಲಿ ಎಲ್ಲಾ ರಾಜಕೀಯವ್ಯಕ್ತಿಗಳ ಮಕ್ಕಳೂ ಕೂಡ ಬರುವಂಥ ಒಂದು ಸಂಸ್ಥೆ ಎಂದು ನಾನು ಕಳೆದ ಸಲ ಸಭೆಯಲ್ಲಿ ತಿಳಿಸಿದ್ದೆ. ಈ ಸಂಸ್ಥೆಯಲ್ಲಿ ರಾಜಕೀಯ ಬಂದರೆ ಒಂದು ಸೆಕ್ಷನ್ ಜನರು ಏನಿದ್ದಾರೆ ಅವರಿಗೆ, ಇದರ ಮೇಲಿನ ಭರವಸೆ ಕಡಿಮೆಯಾಗುತ್ತದೆ. ಯಾವಾಗಲೂ ವಿದ್ಯಾಸಂಸ್ಥೆಗಳು ಯಾವ ಒಂದು ಕಾಂಟ್ರವರ್ಸಿ ಇಲ್ಲದೆ ಎಲ್ಲರ ಒಂದು ಕಾನ್‌ಫಿಡೆನ್ಸ್ ಪಡೆದುಕೊಳ್ಳಬೇಕಾದ್ದು ಅಗತ್ಯ. ಪ್ರೈವೇಟ್ ಮ್ಯಾನೇಜಮೆಂಟುಗಳಲ್ಲಿ ಇಂಥ ಒಂದು ಪ್ರಸಂಗವನ್ನು ತಡೆಗಟ್ಟುವುದಕ್ಕೆ ನಮ್ಮಲ್ಲಿರುವ ಕಾನೂನಿನಲ್ಲಿ ಅವಕಾಶವಿಲ್ಲ. ಮುಂದೆ ಮಾಡುವಂಥ ಬಿಲ್ಲಿನಲ್ಲಿ ಇದನ್ನು ಅಳವಡಿಸಿಕೊಳ್ಳುವ ಇರಾದೆಇದೆ.

Grant of Unauthorised Cultivated Land in Chelur Hobli, Bagepalli Taluk

398. SRI CHOWDA REDDY (Chintamani).—Will the Minister for Revenue be pleased to state:—

(a) the extent of land under unauthorised cultivation in Chelur Hobli Bagepalli taluk of Kolar District (village wise and Survey Nos. may be furnished).